**OS 343/21 PW-1**

**ದಿನಾಂಕ 16.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

PW-1 ರವರ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ.ಹೆಚ್.ಕೆ.ವಕೀಲರಿಂದ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ.

ದಾವಾ ಸ್ವತ್ತಿನ ಚಕ್ಕುಬಂದಿ, ಕ್ರಯಪತ್ರದ ಚಕ್ಕುಬಂದಿ ಹಾಗೂ ವಿಭಾಗ ಪತ್ರದಲ್ಲಿರುವ ಚಕ್ಕುಬಂದಿಗಳು ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ.

ನಾನು ಕ್ರಯಪತ್ರ, ವಿಭಾಗ ಪತ್ರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಹಾಗೂ ನಮ್ಮ ದೊಡ್ಡಪ್ಪ ಹಾಗೂ ಚಿಕ್ಕಪ್ಪ ಒಟ್ಟು ಕುಟುಂಬ ಸ್ವತ್ತನ್ನು 1974-75 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಗೆ ಸದರಿ ವಿಭಾಗ ಪತ್ರದಲ್ಲಿ ಬಿ ಷೆಡ್ಯೂಲ್ ಸ್ವತ್ತು ಬಂದಿರುತ್ತದೆ. ಸರ್ವೆ ನಂಬರ್ 60/3 ಕ್ಕೆ ಚಕ್ಕುಬಂದಿ ಪೂರ್ವ ಹಾಗೂ ಪಶ್ಚಿಮಕ್ಕೆ ಗಿಡ್ಡ ಮಾದನ ಲಿಂಗನ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಬುಕ್ಕಿ ಜವರೇಗೌಡನ ಜಮೀನು, ಉತ್ತರಕ್ಕೆ ಬುಸಿ ಗೌಡನ ಮಗಳು ಲಿಂಗಮ್ಮನ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನಿನ ಮಧ್ಯೆ ಇರುವ ಪಾರಿವಾಳ ತುಂಡು ಸರ್ವೆ ನಂಬರ್ 60/3 ಎಂದರೆ ಸರಿಯಲ್ಲ.

ನಿಪಿ 1 ಕ್ರಯಪತ್ರದಲ್ಲಿ ಪೂರ್ವಕ್ಕೆ ಲಿಂಗಯ್ಯನ ಜಮೀನು ಹಾಗೂ ಪಶ್ಚಿಮಕ್ಕೆ ಸರ್ವೆ ನಂಃ 64 ರ ಜಮೀನು ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಗಿಡ್ಡ ಮಾದನ ಲಿಂಗನ ಜಮೀನು ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ರೈಲ್ವೆ ರಸ್ತೆ ಎಂದರೆ ಸರಿ. ನಿಮ್ಮ ದಾವಾ ಪತ್ರಕ್ಕೆ ಸಂಬಂಧಿಸಿದಂತೆ ಉತ್ತರಕ್ಕೆ ರೈಲ್ವೆ ರಸ್ತೆಗೆ ದಾಖಲೆ ನೀಡಿರುತ್ತೀರ ಎಂದರೆ ಸಾಕ್ಷಿಯು ನೀಡಿರುತ್ತೇನೆಂದು ಉತ್ತರಿಸಿರುತ್ತಾರೆ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ಪ್ರತಿ ವಾದಿಯವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಪ್ರಸ್ತುತ ಅವರ ಹೆಸರಿನಲ್ಲಿಯೇ ಇರುತ್ತದೆ. ದಾವಾ ಸ್ವತ್ತು ಪ್ರತಿವಾದಿಯ ಹೆಸರಿಗೆ ಖಾತೆ 1984 ರಲ್ಲಿ ಆಗಿರುವ ವಿಚಾರ ನನಗೆ ಪ್ರತಿವಾದಿಗೆ ಖಾತೆ ಬದಲಾವಣೆ ಆದಾಗ ತಿಳಿದುಬಂದಿರುತ್ತದೆ. ಖಾತಾ ಬದಲಾವಣೆ ಆದ ದಿನಾಂಕ ವರ್ಷ ನನಗೆ ಗೊತ್ತಿಲ್ಲ.

ನಿಮ್ಮ ತಂದೆ ಚಿಕ್ಕಚನ್ನೇಗೌಡ ಹಾಗೂ ಪ್ರತಿವಾದಿಯ ತಂದೆಗೆ 1984 ನೇ ಸಾಲಿನಲ್ಲಿ ಒಪ್ಪಿಗೆ ಪತ್ರ ನೀಡಿ ಎಂ.ಆರ್. ಆಗಿರುತ್ತದೆ ಎಂದರೆ ಸರಿಯಲ್ಲ. 1984 ರಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಆರ್ ಟಿ ಸಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಆಲೆಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಿದ್ಯುತ್ ಸಂಪರ್ಕವನ್ನು ಪಡೆದು ಆಲೆಮನೆ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಎಂ.ಆರ್ ಗೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿರುವುದಿಲ್ಲ ಹಾಗೂ ಪಹಣಿ ಪತ್ರಿಕೆಯ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮೇಲ್ಮನವಿ ಸಲ್ಲಿಸಲು ನನಗೆ ತೊಂದರೆ ಇತ್ತು ನನಗೆ

ಯಾವ ರೀತಿಯ ತೊಂದರೆ ಎಂದರೆ ನಾನು ವ್ಯವಸಾಯ ಮಾಡುತ್ತಿರುವುದರಿಂದ ಮೇಲ್ಮನವಿ ಸಲ್ಲಿಸಲು ಸಾಧ್ಯವಿಲ್ಲ.

ಸರ್ವೆ ನಂಬರ್ 60/3 ರ ಪೂರ್ವಕ್ಕೆ ನಿಂಗೇಗೌಡ ಜಮೀನು ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಿಂಗಮ್ಮನ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿಯಲ್ಲ . ದಕ್ಷಿಣಕ್ಕೆ ನಿಂಗಮ್ಮನ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ. 60/3 ರಲ್ಲಿ 0.38 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮರಿಚನ್ನಮ್ಮನ ಹೆಸರಿನಲ್ಲಿರುವುದಕ್ಕೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನವಿರುವುದಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸ್ವಾಧೀನತೆಗೆ ಸಂಬಂಧಿಸಿದಂತೆ ನೀವು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 48 ವರ್ಷಗಳ ನಂತರ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ.

ಪ್ರತಿವಾದಿಯು ತೊಂದರೆ ನೀಡಿರುವ ಸಂಬಂಧ ಪೊಲೀಸ್ ಠಾಣೆ ದೂರು ಸಲ್ಲಿಸಿರುವುದಿಲ್ಲ. ನಿಮ್ಮ ಹಾಗೂ ಪ್ರತಿವಾದಿಯ ನಡುವೆ ವ್ಯಾಜ್ಯ ಕಾರಣ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಪ್ರತಿವಾದಿಯನ್ನು ದಾವಾ ಸ್ವತ್ತಿನಿಂದ ಹೊರಗೆ ಕಳುಹಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1984 ರ ಪೂರ್ವದಿಂದಲೂ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಸಾ.ಓ.ಹೇ.ಸ.ಇದೆ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಪಾಂಡವಪುರ.